ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 03-04-1997.

# *ಹಳೆಯ ಸಂಸ್ಕಾರಗಳನ್ನು ಸಮಾಪ್ತಿ ಮಾಡಿ ತಮ್ಮ ನಿಜಸಂಸ್ಕಾರಗಳನ್ನು ಧಾರಣೆ ಮಾಡುವಂತಹ ಎವರ್ ರೆಡಿಯಾಗಿರಿ.*

(पुराने संस्कारों को खत्म कर अपने निजी संस्कार धारण करने वाले एवररेडी बनो)

ಇಂದು ಬಾಪ್‌ದಾದಾರವರು ನಾಲ್ಕಾರು ಕಡೆಯಿಂದ ವಿಶ್ವಪಿತನ ಪ್ರೀತಿಯಲ್ಲಿ ಲವಲೀನ ಮತ್ತು ಅದೃಷ್ಟ ಮಕ್ಕಳನ್ನು ನೋಡುತ್ತಿದ್ದಾರೆ. ಪ್ರತಿಯೊಂದು ಮಗುವಿನ ಭಾಗ್ಯದ ಮೇಲೆ ತಂದೆಗೂ ಹೆಮ್ಮೆಯಿದೆ ನನ್ನ ಮಕ್ಕಳು ವರ್ತಮಾನ ಸಮಯ ಎಷ್ಟು ಮಹಾನಾಗಿದ್ದಾರೆ ಎಂದರೆ ಇಡೀ ಕಲ್ಪದಲ್ಲಿ ಭಲೇ ದೇವತಾ ಸ್ವರೂಪದಲ್ಲಿ, ಭಲೇ ಧರ್ಮನೇತರ ರೂಪದಲ್ಲಿ, ಭಲೇ ಮಹಾತ್ಮರ ರೂಪದಲ್ಲಿ, ಭಲೇ ಪದಮಪತಿ ಆತ್ಮರ ರೂಪದಲ್ಲಾದರೂ ಇಷ್ಟೊಂದು ಭಾಗ್ಯ ಬೇರೆ ಯಾರಿಗೂ ಇಲ್ಲ. ತಮ್ಮ ಇಂತಹ ಶ್ರೇಷ್ಠ ಭಾಗ್ಯವನ್ನು ಸದಾ ಸ್ಮೃತಿಯಲ್ಲಿಟ್ಟುಕೊಳ್ಳುತ್ತೀರಾ? ಸದಾ ಈ ಅಪರಿಮಿತ(ಅನಂತ) ಗೀತೆಯನ್ನು ಮನದಲ್ಲಿ ಹಾಡುತ್ತಿರುತ್ತೀರಿ. ವಾಹ್ ಭಾಗ್ಯವಿದಾತಾ ತಂದೆ ಮತ್ತು ವಾಹ್ ಶ್ರೇಷ್ಠ ಆತ್ಮನಾದ ನನ್ನ ಭಾಗ್ಯ! ಈ ಭಾಗ್ಯದ ಗೀತೆಯು ಸದಾ ತಾನಾಗಿಯೇ ಮೊಳಗುತ್ತಿರುತ್ತದೆಯೇ? ತಂದೆ ಮಕ್ಕಳನ್ನು ನೋಡಿ ಸದಾ ಹರ್ಷಿತರಾಗುತ್ತಾರೆ. ಮಕ್ಕಳು ಸಹ ಹರ್ಷಿತರಾಗುತ್ತಾರೆ ಆದರೆ ಕೆಲ-ಕೆಲವೊಮ್ಮೆ ಮಧ್ಯದಲ್ಲಿ ತಮ್ಮ ಭಾಗ್ಯವನ್ನು ಪ್ರತ್ಯಕ್ಷ ಮಾಡುವ ಬದಲಾಗಿ ಗುಪ್ತ ಮಾಡಿಬಿಡುತ್ತಾರೆ. ಬಾಬಾ ನೋಡುತ್ತಿದ್ದಾರೆ- ಮಕ್ಕಳಲ್ಲಿ ತಮ್ಮ ಸೌಭಾಗ್ಯದ ನಶೆ, ನಿಶ್ಚಯ ಗುಪ್ತ ಆದಾಗ ಏನು ಹೆಳುತ್ತೀರಿ? ಡ್ರಾಮಾ. ಆದರೆ ತಂದೆ ಬಾಪ್‌ದಾದಾರವರು ಎಲ್ಲಾ ಮಕ್ಕಳಿಗೆ ಸದಾ ಭಾಗ್ಯದ ಸ್ಮೃತಿ ಸ್ವರೂಪರನ್ನಾಗಿ ನೋಡಲು ಬಯಸುತ್ತಾರೆ. ನೀವೆಲ್ಲರೂ ಇದನ್ನೇ ಬಯಸುತ್ತೀರಿ 'ಆದರೆ' ಎಂಬುದು ಮಧ್ಯದಲ್ಲಿ ಬಂದುಬಿಡುತ್ತದೆ. ಯಾರನ್ನಾದರೂ ಕೇಳಿರಿ ಎಲ್ಲಾ ಮಕ್ಕಳು ಇದೇ ಲಕ್ಷ್ಯವನ್ನು ಇಟ್ಟುಕೊಂಡು ನಡೆಯುತ್ತಿದ್ದಾರೆ. ನಾನು ತಂದೆಯ ಸಮಾನ ಆಗಲೇ ಬೇಕು. ಲಕ್ಷ್ಯವು ಬಹಳ ಚೆನ್ನಾಗಿದೆ. ಲಕ್ಷ್ಯ ಶ್ರೇಷ್ಠವಾಗಿದೆ, ಬಹಳ ಒಳ್ಳೆಯದಾಗಿದೆ ಆದರೂ ಕೆಲವೊಮ್ಮೆ ಪ್ರತ್ಯಕ್ಷ ರೂಪದಲ್ಲಿ, ಕೆಲವೊಮ್ಮೆ ಗುಪ್ತ ರೂಪದಲ್ಲಿದೆ ಏಕೆ? ಕಾರಣವೇನು? ಬಾಪ್‌ದಾದಾಗೆ ಇಷ್ಟೊಂದು ಒಳ್ಳೊಳ್ಳೆಯ ಭರವಸೆಯನ್ನು ಕೊಡುತ್ತೀರಿ, ಆತ್ಮಿಕ ವಾರ್ತಾಲಾಪವನ್ನೂ ಮಾಡುತ್ತೀರಿ ಆದರೂ ಸಹ ಲಕ್ಷ್ಯ ಮತ್ತು ಲಕ್ಷಣದಲ್ಲಿ ಅಂತರವೇಕೆ? ಬಾಪ್‌ದಾದಾರವರು ಪರಿಣಾಮದಲ್ಲಿ ಕಾರಣವೇನೆಂದು ನೋಡಿದರು? ನೀವೆಲ್ಲರಂತೂ ತಿಳಿದುಕೊಂಡಿದ್ದೀರಿ, ಹೊಸ ಮಾತೇನಲ್ಲ ಆದರೂ ಬಾಪ್‌ದಾದಾರವರು ಪುನಃ ಹೇಳುತ್ತಾರೆ.

ಬಾಪ್‌ದಾದಾರವರು ಮೂರು ವಿಷಯಗಳನ್ನು ನೋಡಿದರು - 1.ಯೋಚಿಸುವುದು ಅರ್ಥಾತ್ ಸಂಕಲ್ಪ ಮಾಡುವುದು. 2.ಮಾತನಾಡುವುದು ಅರ್ಥಾತ್ ವರ್ಣನೆ ಮಾಡುವುದು. 3.ಕರ್ಮದಲ್ಲಿ ಪ್ರತ್ಯಕ್ಷ ಅನುಭವದಲ್ಲಿ ಮತ್ತು

ಚಲನೆ (ನಡವಳಿಕೆ)ಯಲ್ಲಿ ತರುವುದು. ಮೂರರ ಸಮಾನತೆ ಕಡಿಮೆ ಇದೆ. ಯಾವಾಗ ಸಮಾನವಾಗುತ್ತವೆಯೋ ಆಗ ನಿಶ್ಚಯ ಮತ್ತು ನಶೆ ಪ್ರತ್ಯಕ್ಷವಾಗುವುದು ಮತ್ತು ಯಾವಾಗ ಬ್ಯಾಲೆನ್ಸ್ ಕಡಿಮೆಯಿರುತ್ತದೆಯೋ ಆಗ ನಿಶ್ಚಯ ಮತ್ತು ನಶೆ ಗುಪ್ತ ಆಗುತ್ತದೆ. ಪರಿಣಾಮದಲ್ಲಿ ನೋಡಲಾಯಿತು ಯೊಚಿಸುವ ಗತಿ ಬಹಳ ಚೆನ್ನಾಗಿದೆ ಮತ್ತು ತೀವ್ರವಾಗಿದೆ. ಮಾತನಾಡುವುದರಲ್ಲಿ ತೀವ್ರತೆ ಮತ್ತು ನಶೆಯು 75% ಸರಿಯಿದೆ. ಮಾತನಾಡುವುದರಲ್ಲಿ ಅಧಿಕ ಮಕ್ಕಳು ಬುದ್ಧಿವಂತರಾಗಿದ್ದಾರೆ ಆದರೆ ಪ್ರಾಕ್ಟಿಕಲ್ ನಡತೆಯಲ್ಲಿ ತರುವುದರಲ್ಲಿ ಪೂರ್ಣ ಅಂಕಗಳು ಕಡಿಮೆಯಿವೆ. ಎರಡು ಮಾತುಗಳಲ್ಲಿ ಸರಿಯಿದೆ ಆದರೆ ಮೂರನೇ ಮಾತಿನಲ್ಲಿ ಬಹಳ ಕಡಿಮೆಯುದೆ. ಕಾರಣ? ಸಂಕಲ್ಪವೂ ಒಳ್ಳೆಯದಾಗಿದೆ, ಮಾತು ಸಹ ಬಹಳ ಸುಂದರ ರೂಪದಲ್ಲಿದೆ ಆದರೆ ಪ್ರಾಕ್ಟಿಕಲ್ನಲ್ಲಿ ಕಡಿಮೆ ಏಕೆ ಆಗುತ್ತದೆ? ಕಾರಣವೇನು, ತಿಳಿದುಕೊಂಡಿದ್ದೀರಾ? ಹೌದು ಅಥವಾ ಇಲ್ಲವೆಂದು ಹೇಳಿ. ಬಹಳ ಚೆನ್ನಾಗಿ ತಿಳಿದುಕೊಂಡಿದ್ದೀರಿ. ಒಂದುವೇಳೆ ಯಾರಿಗಾದರೂ ಈ ವಿಷಯದ ಮೇಲೆ ಭಾಷಣ ಮಾಡಿ ಅಥವಾ ಕ್ಲಾಸ್ ಮಾಡಿ ಅಂದಾಗ ಎಷ್ಟು ಚೆನ್ನಾಗಿ ಕ್ಲಾಸ್ ಮಾಡಿಸುವರು! ಮತ್ತು ದೊಡ್ಡ ನಿಶ್ಚಯ, ನಶೆ, ರುಚಿಯಿಂದ ಭಾಷಣವನ್ನೂ ಮಾಡುವರು, ಕ್ಲಾಸನ್ನೂ ಮಾಡಿಸುವರು. ಬಾಪ್‌ದಾದಾರವರು ಎಲ್ಲರ ಕ್ಲಾಸ್ ಗಳನ್ನು ಕೇಳುತ್ತಾರೆ ಏನೇನು ಹೇಳುತ್ತಾರೆಂದು. ವಾಹ್! ಮಕ್ಕಳೇ ವಾಹ್! ಎಂದು ಮುಗುಳ್ನಗುತ್ತಿರುತ್ತಾರೆ.

ಮೂಲ ಮಾತಾಗಿದೆ - ಬಾಪ್‌ದಾದಾರವರು ಮೊದಲು ಸಹ ತಿಳಿಸಿದ್ದಾರೆ ಈಗ ರಿವೈಸ್ ಕೋರ್ಸ್ ನಡೆಯುತ್ತಿದೆ. ತಂದೆಯು ಹೇಳುತ್ತಾರೆ ಕಾರಣ ಒಂದೇ ಆಗಿದೆ, ಜಾಸ್ತಿ ಅಲ್ಲ, ಒಂದೇ ಕಾರಣ ಮತ್ತು ಕಾರಣವನ್ನು ನಿವಾರಣೆ ಮಾಡುವುದು ಕಷ್ಟವೂ ಅಲ್ಲ, ಬಹಳ ಸಹಜವಾಗಿದೆ. ಆದರೆ ಸಹಜವನ್ನು ಕಷ್ಟವನ್ನಾಗಿ ಮಾಡಿಬಿಡುತ್ತಾರೆ. ಕಷ್ಟವಿಲ್ಲ, ಆದರೂ ಏಕೆ ಕಷ್ಟವನ್ನಾಗಿ ಮಾಡಿಕೊಳ್ಳುತ್ತಾರೆ ? ನಶೆಯು ಗುಪ್ತವಾಗಿಬಿಡುತ್ತದೆ. ಒಂದೇ ಕಾರಣವಾಗಿದೆ ಏನೆಲ್ಲಾ ಧಾರಣೆಯ ವಿಷಯಗಳನ್ನು ಕೇಳುತ್ತೀರೋ, ಮಾಡುತ್ತೀರೋ, ಶಕ್ತಿಗಳ ರೂಪದಲ್ಲಿ, ಗುಣಗಳ ರೂಪದಲ್ಲಿ, ಧಾರಣೆಯ ವಿಷಯಗಳನ್ನು ಬಹಳ ಚೆನ್ನಾಗಿ ಮಾತನಾಡುತ್ತೀರಿ, ಎಷ್ಟು ಚೆನ್ನಾಗಿ ಮಾತನಾಡುತ್ತೀರಿ ಎಂದರೆ ಕೇಳುವಂತವೇರು ಭಲೇ ಅಜ್ಞಾನಿ ಅಥವಾ ಜ್ಞಾನಿಯೇ ಇರಲಿ ಕೇಳಿ ಬಹಳ ಚೆನ್ನಾಗಿದೆ, ಬಹಳ ಚೆನ್ನಾಗಿದೆ ಎನ್ನುತ್ತಾ ಚಪ್ಪಾಳೆಯನ್ನು ಹಾಕುತ್ತಾರೆ. ಬಹಳ ಚೆನ್ನಾಗಿದೆ ಎನ್ನುತ್ತಾರೆ. ಆದರೆ ಎಷ್ಟು ಬಾರಿ 'ಆದರೆ' ಎಂಬ ಮಾತು ಬಂದಿತು? ಈ ಆದರೆ ಎಂಬ ಮಾತೇ ವಿಘ್ನವನ್ನು ಹಾಕುತ್ತದೆ. ಆದರೆ ಎಂಬ ಶಬ್ದ ಸಮಾಪ್ತಿ ಮಾಡಿ ಅರ್ಥಾತ್ ತಂದೆ ಸಮಾನ ಸಮೀಪ ಬರುವುದು ಮತ್ತು ತಂದೆಯ ಸಮೀಪ ಬರುವುದು ಅರ್ಥಾತ್ ಸಮಯವನ್ನು ಸಮೀಪ ತರುವುದು. ಆದರೆ ಇಲ್ಲಿಯವರೆಗೂ 'ಆದರೆ' ಶಬ್ದವನ್ನು ಹೇಳಬೇಕಾಗಿದೆ. ತಂದೆಗೆ ಇಷ್ಟವಾಗುವುದಿಲ್ಲ ಆದರೆ ಹೇಳಬೇಕಾಗುತ್ತದೆ ಕಾರಣ ಏನಾಗಿದೆ? ಏನು ಹೇಳುತ್ತೀರಿ, ಧಾರಣೆಯನ್ನೂ ಮಾಡುತ್ತೀರಿ, ಧಾರಣೆಯ ರೂಪದಿಂದ ಧಾರಣೆ ಮಾಡುತ್ತೀರಿ ಮತ್ತು ಆ ಧಾರಣೆ ಕೆಲವರಿಗೆ ಸ್ವಲ್ಪ ಸಮಯ, ಇನ್ನೂ ಕೆಲವರಿಗೆ ಹೆಚ್ಚಿನ ಸಮಯ ನಡೆಯುತ್ತಿದೆ. ಆದರೆ ಧಾರಣೆ ಪ್ರತ್ಯಕ್ಷದಲ್ಲಿ ಸದಾ ಹೆಚ್ಚುತ್ತಾ ಇರಬೇಕು. ಅದಕ್ಕಾಗಿ ಮುಖ್ಯ ವಿಷಯ ಹೇಗಾದರೆ ದ್ವಾಪರದಿಂದ ಹಿಡಿದು ಅಂತಿಮ ಜನ್ಮದವರೆಗೂ ಏನೆಲ್ಲಾ ಅವಗುಣಗಳು ಅಥವಾ ಬಲಹೀತಗಳಿವೆಯೋ ಅವುಗಳ ಧಾರಣೆ ಸಂಸ್ಕಾರ ರೂಪದಲ್ಲಿ ಆಗಿಬಿಟ್ಟಿದೆ ಮತ್ತು

ಸಂಸ್ಕಾರವಾಗಿರುವ ಕಾರಣ ಪರಿಶ್ರಮ ಮಾಡಬೇಕಾಗುವುದಿಲ್ಲ. ಬಿಡಲು ಬಯಸುತ್ತೀರಿ, ಇಷ್ಟವಾಗುವುದಿಲ್ಲ ಆದರೆ ಹೇಳುತ್ತೀರಿ ಏನು ಮಾಡುವುದು? ನನ್ನ ಸಂಸ್ಕಾರವೇ ಈ ರೀತಿ ಇದೆ. ನೀವು ಬೇಜಾರು ಮಾಡಿಕೊಳ್ಳಬೇಡಿರಿ, ನನ್ನ ಸಂಸ್ಕಾರವೇ ಈ ರೀತಿ ಇದೆ. ಸಂಸ್ಕಾರ ಹೇಗೆ ಆಯಿತು? ತಯಾರು ಮಾಡಿದಾಗಲೇ ಆಯಿತಲ್ಲವೇ. ದ್ವಾಪರ ಯುಗದಿಂದ ತಯಾರಾಗಿರುವ ವಿರುದ್ಧ ಸಂಸ್ಕಾರಗಳಿಂದ ಬಲಹೀನವಾಗಿ ಕೂಡ ಆಗುತ್ತಿದ್ದೀರಿ. ಮತ್ತೆ ಏನು ಮಾಡುವುದು? ಸಂಸ್ಕಾರವಾಗಿದೆ ಎಂದು ಕೂಡ ಹೇಳುತ್ತಿದ್ದೀರಿ. ಆ ಸಂಸ್ಕಾರ ಸಹಜವಾಗಿ ಅವಶ್ಯಕತೆ ಇಲ್ಲದಿದ್ದರೂ ಪ್ರತ್ಯಕ್ಷವಾಗಿ ಬಿಡುತ್ತಿದೆಯಲ್ಲವೇ? ಕೆಲವರಿಗೆ ಕ್ರೋಧ ಬಂದುಬಿಡುತ್ತದೆ. ಇನ್ನೂ ಕೆಲವರು ಸಮಯದ ನಂತರ ನೀವು ಕೆಟ್ಟದಾಗಿ ತಿಳಿಯಬೇಡಿರಿ ನನ್ನ ಸಂಸ್ಕಾರವೇ ಅಷ್ಟು ಎಂದು ಹೇಳುತ್ತಿದ್ದಾರೆ. ಕ್ರೋಧವನ್ನು ಸಂಸ್ಕಾರವನ್ನಾಗಿ ಮಾಡಿಕೊಂಡಿದ್ದಾರೆ. ಅವಗುಣಗಳನ್ನು ಸಂಸ್ಕಾರವಾನ್ನಾಗಿ ತಯಾರು ಮಾಡಿಕೊಳ್ಳುತ್ತಿದ್ದಾರೆ ಮತ್ತು ಗುಣಗಳನ್ನೇಕೆ ಸಂಸ್ಕಾರವನ್ನಾಗಿ ತಯಾರು ಮಾಡಿಕೊಳ್ಳುತ್ತಿಲ್ಲ? ಹೇಗಾದರೆ ಕ್ರೋದ ಅಜ್ಞಾನಿ ಆತ್ಮರ ಶಕ್ತಿಯೋ ಹಾಗೆಯೇ ಜ್ಞಾನಿ ಆತ್ಮನ ಶಕ್ತಿ ಶಾಂತಿ ಮತ್ತು ಸಹನೆ. ಅಜ್ಞಾನಿಗಳ ಶಕ್ತಿಯಾದ ಕ್ರೋಧವನ್ನು ಬಹಳ ಒಳ್ಳೆಯ ಸಂಸ್ಕಾರವನ್ನಾಗಿ ತಯಾರು ಮಾಡಿಕೊಂಡಿದ್ದೀರಿ ಮತ್ತು ಆ ಸಂಸ್ಕಾರವನ್ನು ಉಪಯೋಗಿಸುತ್ತಿದ್ದೀರಿ ಕೂಡ. ಆನಂತರ ಕ್ಷಮಿಸಿ ಎಂದು ಕೇಳುತ್ತಿದ್ದೀರಿ. ಕ್ಷಮಿಸಿರಿ, ಇನ್ನು ಮುಂದೆ ಹೀಗೆ ಆಗುವುದಿಲ್ಲ ಎನ್ನುತ್ತಿದ್ದೀರಿ. ಆದರೆ ಇನ್ನೂ ಹೆಚ್ಚಾಗುತ್ತಿದೆ. ಕಾರಣವೇನು? ಏಕೆಂದರೆ ಸಂಸ್ಕಾರವನ್ನಾಗಿ ತಯಾರು ಮಾಡಿಕೊಳ್ಳುತ್ತಿದ್ದೀರಿ. ಬಾಪ್‌ದಾದಾ ಒಂದೇ ವಿಷಯವನ್ನು ಮಕ್ಕಳಿಗೆ ಪದೇ ಪದೇ ತಿಳಿಸುತ್ತಿದ್ದಾರೆ. ಈಗ ಪ್ರತಿಯೊಂದು ಗುಣವನ್ನು, ಪ್ರತಿಯೊಂದು ಜ್ಞಾನದ ವಿಷಯವನ್ನು ಸಂಸ್ಕಾರವನ್ನಾಗಿ ಮಾಡಿಕೊಳ್ಳಿರಿ.

ಬ್ರಾಹ್ಮಣ ಆತ್ಮರ ನಿಜಸಂಸ್ಕಾರವು ಯಾವುದಾಗಿದೆ? ಕ್ರೋಧವೇ ಅಥವಾ ಸಹನೆಶೀಲತೆಯೇ? ಯಾವುದಾಗಿದೆ? ಸಹನಶಕ್ತಿ, ಶಾಂತಿಯ ಶಕ್ತಿಯಾಗಿದೆಯಲ್ಲವೇ! ಅವಗುಣಗಳನ್ನು ಸಹಜ ಸಂಸ್ಕಾರವನ್ನಾಗಿ ಮಾಡಿಕೊಂಡು ಬಿಟ್ಟಿದ್ದೀರಿ, ಎಷ್ಟು ತಮ್ಮದಾಗಿಸಿ ಕೊಂಡಿದ್ದೀರೆಂದರೆ ಬೇಡವಂದರೂ ಬರುತ್ತಿರುತ್ತವೆ. ಇದೇ ರೀತಿಯಲ್ಲಿ ಗುಣಗಳನ್ನು ತಮ್ಮದಾಗಿಸಿಕೊಂಡು ಸಂಸ್ಕಾರವನ್ನಾಗಿ ಮಾಡಿಕೊಂಡಿದ್ದೀರಿ. ನನ್ನ ನಿಜಸಂಸ್ಕಾರವು ಯಾವುದಾಗಿದೆ? ಎಂಬುದನ್ನು ಸದಾ ನೆನಪಿಟ್ಟುಕೊಳ್ಳಿರಿ. ಅವರಂತು ರಾವಣನ ಆಸ್ತಿಯನ್ನು ಸಂಸ್ಕಾರಗಳನ್ನಾಗಿ ಮಾಡಿಕೊಂಡುಬಿಟ್ಟರು. ಬೇರೆಯವರ ವಸ್ತುವನ್ನು ತಮ್ಮದನ್ನಾಗಿ ಮಾಡಿಕೊಂಡುಬಿಟ್ಟರು. ಈಗ ತಂದೆಯ ಖಜಾನೆಯನ್ನು ತಮ್ಮದನ್ನಾಗಿ ಮಾಡಿಕೊಳ್ಳಿರಿ. ರಾವಣನ ವಸ್ತುವನ್ನು ಸಂಭಾಲನೆ ಮಾಡಿಟ್ಟುಕೊಳ್ಳುತ್ತಿರಿ ಮತ್ತು ತಂದೆಯ ವಸ್ತುವನ್ನು ಕಳೆದು ಹಾಕುತ್ತೀರಿ, ಏಕೆ? ರಾವಣನೊಂದಿಗೆ ಪ್ರೀತಿಯಿದೆ! ರಾವಣ ಇಷ್ಟನಾಗುತ್ತಾನೆಯೇ ಅಥವಾ ತಂದೆ ಇಷ್ಟವಾಗುತ್ತಾರೆಯೇ? ಎಲ್ಲರೂ ತಂದೆ ಇಷ್ಟವಾಗುತ್ತಾರೆಂದು ಹೇಳುತ್ತಾರೆ, ಇದನ್ನು ಮನಸ್ಸಿನಿಂದ ಹೇಳುತ್ತಿದ್ದೀರಾ? ಆದರೆ ಯಾರು ಇಷ್ಟವಾಗುತ್ತಾರೆ ಅವರ ವಿಷಯಗಳು ನಿಶ್ಚಯದ ಶಾಯಿಯಿಂದ ಹೃದಯದಲ್ಲಿ ಸಮಾವೇಶವಾಗುತ್ತದೆ. ರಾವಣನ ಸಂಸ್ಕಾರಕ್ಕೆ ವಶರಾಗುತ್ತಾರೆ ಆದರೂ ಬಾಬಾ ನಿಮ್ಮೊಂದಿಗೆ ನಮಗೆ ಬಹಳ ಪ್ರೀತಿಯಿದೆ, ಬಹಳ ಪ್ರೀತಿಯಿದೆ ಎಂದು ಹೇಳುತ್ತಾರೆ. ಬಾಬಾರವರು ಎಷ್ಟು ಪ್ರೀತಿಯಿದೆ? ಎಂದು ಕೇಳಿದಾಗ ಆಕಾಶಕ್ಕಿಂತಲೂ ಹೆಚ್ಚು ಎಂದು ಹೇಳುತ್ತೀರಿ. ಎಷ್ಟು ಮುಗ್ದ(ಬೊಳಾ) ಮಕ್ಕಳು

ಎಂದು ಬಾಬಾರವರು ಸಹ ಕೇಳಿ ಖುಷಿಯಾಗುತ್ತಾರೆ. ಆದರೂ ತಂದೆಯು ಹೇಳುತ್ತಾರೆ ತಂದೆಯು ಎಲ್ಲಾ ಮಕ್ಕಳಿಗೆ ಭರವಸೆಯನ್ನು ಕೊಡುತ್ತಾರೆ - ಹೃದಯದಿಂದ ಒಂದುವೇಳೆ ಒಂದು ಬಾರಿಯೂ ನನ್ನ ಬಾಬಾ ಎಂದು ಹೇಳಿ ಬಿಟ್ಟರೆ, ಒಂದುವೇಳೆ ಮಧ್ಯ-ಮಧ್ಯದಲ್ಲಿ ಮರೆತು ಹೋಗುತ್ತೀರಿ ಆದರೆ ಒಂದು ಬಾರಿಯೂ ಹೃದಯದಿಂದ 'ನನ್ನ ಬಾಬಾ' ಎಂದು ಹೇಳಿದರೆ, ತಂದೆಯು ಹೇಳುತ್ತಾರೆ ಯಾರೇ ಇರಲಿ, ಹೇಗೇ ಇರಲಿ ನನ್ನವರಾಗಿಯೇ ಇದ್ದೀರಿ. ಕರೆದುಕೊಂಡಂತು ಹೋಗಲೇಬೇಕು. ಕೇವಲ ತಂದೆ ಏನು ಬಯಸುತ್ತಾರೆಂದರೆ ಮೆರವಣಿಗೆಯನ್ನು ಮಾಡಿಕೊಂಡು ಬರಬಾರದು. ಪ್ರೀಯತಮೆಯರಾಗಿ ಒಬ್ಬರೇ ಬನ್ನಿರಿ. ಇದನ್ನು ಕೇಳಿ ಎಲ್ಲರೂ  ಖುಷಿಯಾಗುತ್ತಿದ್ದೀರಿ. ನಿಮ್ಮ ಮೇಲೆ ನಿಮಗೇ ನಗು ಸಹ ಬರುತ್ತಿದೆ.

ಈಗ ಕೇಳುವ ಸಮಯದಲ್ಲಿ ತಮ್ಮ ಮೇಲೆ ತಾವೇ ನಗುತ್ತಿರಿ ಅಲ್ಲವೇ! ಆವೇಶ ಬಂದಾಗ ಕೆಂಪು ಹಳದಿಯಾಗಿಬಿಡುತ್ತಿರಿ. ಆದರೆ ತಂದೆಯು ಫಲಿತಾಂಶದಲ್ಲಿ ನೋಡುತ್ತಾರೆ, ಮಕ್ಕಳಲ್ಲಿ ಒಂದು ವಿಶೇಷತೆ ಬಹಳ ಚೆನ್ನಾಗಿದೆ ಅದು ಯಾವುದಾಗಿದೆ? ಪವಿತ್ರತೆಯಲ್ಲಿ ಇರುವುದು, ಇದಕ್ಕಾಗಿ ಎಷ್ಟೇ ಸಹನೆ ಮಾಡಬೇಕಾಗಲಿ, ಎಷ್ಟೇ ವಿರುದ್ಧ ಮಾಡುವವರು ಮುಂದೆ ಬರಲಿ ಆದರೆ ಈ ಮಾತಿನಲ್ಲಿ 75% ಚೆನ್ನಾಗಿದ್ದಿರಿ. ಕೆಲ ಕೆಲವರು ಅಲ್ಲ ಸಲ್ಲದ ಮಾತುಗಳನ್ನು ಮಾತನಾಡುತ್ತಾರೆ ಆದರೂ ಸಹ 75% ಈ ಮಾತಿನಲ್ಲಿ ಪಾಸ್ ಆಗಿ ತೋರಿಸಿದ್ದೀರಿ. ಈಗ ಅದರ ನಂತರ ಎರಡನೇ ಸಬ್ಜೆಕ್ಟ್ ಯಾವುದು ಬರುತ್ತದೆ? ಕ್ರೋಧ. ದೇಹಬಾನವಂತೂ ಪೂರ್ಣ ಇದ್ದೇ ಇದೆ. ಆದರೆ  ಕ್ರೋಧದ ಸಬ್ಜೆಕ್ಟ್ನಲ್ಲಿ ಬಹಳ ಕಡಿಮೆ ಪಾಸಾಗಿದ್ದೀರಿ. ಬಹುಶಃ ಕ್ರೋಧ ಯಾವ ವಿಕಾರವು ಅಲ್ಲ, ಇದು ಶಾಸ್ತ್ರವಾಗಿದೆ, ವಿಕಾರವಲ್ಲ, ಎಂದು ತಿಳಿಯುತ್ತಿದ್ದೀರಿ ಆದರೆ ಕ್ರೋಧ ಜ್ಞಾನಿ ಆತ್ಮನಿಗೆ ಮಹಾ ಶತ್ರುವಾಗಿದೆ, ಏಕೆಂದರೆ ಕ್ರೋಧ ಅನೇಕ ಆತ್ಮರ ಸಂಬಂಧ, ಸಂಪರ್ಕದಲ್ಲಿ ಬರುವುದರಿಂದ ಪ್ರತ್ಯಕ್ಷವಾಗಿ ಬಿಡುತ್ತದೆ ಮತ್ತು ಕ್ರೋಧವನ್ನು ನೋಡಿ ತಂದೆಯ ಹೆಸರು ಬಹಳಷ್ಟು ಗ್ಲಾನಿ(ನಿಂದೆ) ಆಗುತ್ತದೆ. ಹೇಳುವವರು ಜ್ಞಾನಿ ಆತ್ಮರನ್ನೂ ನೋಡಿದ್ದೇವೆ, ಅವರು ಕೂಡ ಹೀಗೆ ಇರುತ್ತಾರೆ ಎಂದು ಹೇಳುತ್ತಾರೆ. ಕ್ರೋಧದ ಅನೇಕ ರೂಪಗಳಿವೆ. ಒಂದಂತೂ ಮಹಾನ್ ರೂಪ ನೀವು ಚೆನ್ನಾಗಿ ತಿಳಿದುಕೊಂಡಿದ್ದೀರಿ, ಇವರು ಕ್ರೋದವನ್ನು ಮಾಡುತ್ತಿದ್ದಾರೆ ಎಂದು ಕಾಣಿಸುತ್ತದೆ. ಎರಡನೆಯದು ಕ್ರೋಧದ ಸೂಕ್ಷ್ಮ ಸ್ವರೂಪ ಒಳಗಡೆಯ  ಈರ್ಷ್ಯೆ, ದ್ವೇಷ, ತಿರಸ್ಕಾರವಾಗಿದೆ. ಈ ರೂಪದಲ್ಲಿ ಜೋರಾಗಿ ಮಾತನಾಡುವುದು ಅಥವಾ ಹೊರಗಡೆಯ ಯಾವುದೇ ರೂಪದಲ್ಲಿ ಕಾಣಿಸುವುದಿಲ್ಲ, ಆದರೆ ಹೇಗೆ ಹೊರಗಿನ ಕ್ರೋಧವು ಅಗ್ನಿ ರೂಪವಾಗಿದೆಯಲ್ಲವೇ, ಅವರು ಒಳಗಡೆ ಸ್ವಯಂ ಸುಟ್ಟುಕೊಳ್ಳುತ್ತಿರುತ್ತಾರೆ ಮತ್ತು ಇನ್ನೊಬ್ಬರನ್ನು ಸಹ ಸುಡುತ್ತಿರುತ್ತಾರೆ. ಈ ಈರ್ಷ್ಯೆ, ದ್ವೇಷ, ತಿರಸ್ಕಾರ - ಇವು ಯಾರಲ್ಲಿವೆಯೋ ಅವರು ಈ ಅಗ್ನಿಯಲ್ಲಿ ಒಳಗಡೆಯೇ ಸುಡುತ್ತಿರುತ್ತಾರೆ. ಹೊರಗಡೆಯಿಂದ ಕೆಂಪು, ಹಳದಿಯಾಗುವುದಿಲ್ಲ, ಕೆಂಪು ಹಳದಿಯು ಸರಿ ಇದೆ ಆದರೆ ಅವರು ಕಪ್ಪಾಗಿ ಬಿಡುತ್ತಾರೆ. ಮೂರನೆಯದು ಕ್ರೋಧದ ಚತುರತೆಯ ರೂಪವು ಇದೆ. ಅದೇನಾಗಿದೆ? ಹೇಳುವುದರಲ್ಲಿ ತಿಳಿದುಕೊಳ್ಳುವುದರಲ್ಲಿ ಈ ರೀತಿ ತಿಳಿಯುತ್ತಾರೆ ಅಥವಾ ಹೇಳುತ್ತಾರೆ ಕೆಲವೊಮ್ಮೆ ಗಂಭೀರ(ಸೀರಿಯಸ್)ವಾಗಬೇಕಾಗುತ್ತದೆ. ಕಲ್ಯಾಣಕ್ಕೋಸ್ಕರ ಕೆಲವೊಮ್ಮೆ ಕಾನೂನನ್ನು ಕೈಯಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಈಗ ಕಲ್ಯಾಣವಾಗಿದೆಯೇ ಅಥವಾ ಇಲ್ಲವೇ ಎಂದು ತಮ್ಮೊಂದಿಗೆ ತಾವೇ ಕೇಳಿಕೊಳ್ಳಿರಿ.

ಬಾಪ್‌ದಾದಾರವರು ಯಾರಿಗೂ ಎಂದೂ ತಮ್ಮ ಕೈಯಲ್ಲಿ ಕಾನೂನು ತೆಗೆದುಕೊಳ್ಳುವ ಅನುಮತಿಯನ್ನು ಕೊಟ್ಟಿಲ್ಲ. ಎಂದಾದರೂ ಯಾವುದೇ ಮುರಳಿಯಲ್ಲಿ ಹೇಳಿದ್ದಾರೇಯೇ? ಕಾನೂನು ಕಯಲ್ಲಿ ತೆಗೆದುಕೊಳ್ಳುವವರ ಒಳಗಡೆಯ ರೂಪ ಅದೇ ಕ್ರೋಧದ ಅಂಶವಾಗಿರುತ್ತದೆ. ನಿಮಿತ್ತ ಆತ್ಮರು ಕೂಡ ಕಾನೂನನ್ನು ಕೈಯಲ್ಲಿ ತೆಗೆದುಕೊಳ್ಳುವುದಿಲ್ಲ ಕೇವಲ ರಿವೈಸ್ ಮಾಡುತ್ತಾರೆ ಅಷ್ಟೇ . ಕಾನೂನನ್ನು ಕೈಯಲ್ಲಿ ತೆಗೆದುಕೊಳ್ಳುವುದಿಲ್ಲ ಆದರೆ ತಂದೆಯಿಂದ ತಯಾರಾಗಿರುವ ಕಾನೂನನ್ನು ರಿವೈಸ್ ಮಾಡಬೇಕು ಅಷ್ಟೇ, ಇದು ಕೂಡ ನಿಮಿತ್ತವಾದವರಿಗೆ ಅವಕಾಶವಿದೆ ಎಲ್ಲರಿಗೂ ಅಲ್ಲ.

ಇಂದು ಬಾಪ್‌ದಾದಾರವರು ಅಧಿಕಾರಿಯಾಗಿ ಶಿಕ್ಷಣವನ್ನು ನೀಡುತ್ತಿದ್ದಾರೆ, ಪ್ರೀತಿಯಿಂದ ತೆಗೆದುಕೊಳ್ಳಿರಿ ಏಕೆಂದರೆ ಬಾಪ್‌ದಾದಾರವರು ಮಕ್ಕಳು ಬರೆದಿರುವಂತಹ, ಮಾಡಿರುವಂತಹ ಭರವಸೆಗಳನ್ನು ನೋಡಿ, ಕೇಳಿ ಮುಗುಳ್ನಗುತ್ತಿದ್ದಾರೆ. ಈಗ ಬಾಪ್‌ದಾದಾರವರು ಏನೆಲ್ಲಾ ತಿಳಿಸಿದ್ದಾರೆಯೋ ಆ ಪ್ರತಿಯೊಂದು ಗುಣವನ್ನು ನಿಜಸಂಸ್ಕಾರವನ್ನಾಗಿ ಮಾಡಿಕೊಳ್ಳಿರಿ. ಅಂಡರ್ಲೈನ್ ಮಾಡಿದ್ದೀರಾ? ಈಗಿನಿಂದಲೇ ಹೇಳಿರಿ - ಶಾಂತ ಸ್ವರೂಪದಲ್ಲಿರುವುದು, ಸಹನಶೀಲರಾಗುವುದು - ಇದಂತೂ ನನ್ನ ಸಂಸ್ಕಾರವಾಗಿಬಿಟ್ಟಿದೆ. ನಂತರ ಬಾಪ್‌ದಾದಾರವರು ಮಿಲನ ಮಾಡಲು ಬಂದಾಗ ಬಾಪ್‌ದಾದಾರವರಿಗೆ ಈ ಐದು ಆರು ತಿಂಗಳಲ್ಲಿ ಇದನ್ನು ತಮ್ಮ ನಿಜ ಸಂಸ್ಕಾರವನ್ನಾಗಿ ಮಾಡಿಕೊಂಡು ತೋರಿಸಿರಿ. ಅದಕ್ಕಾಗಿ ಇಂದು ರಿಜಲ್ಟ್ ತಿಳಿಸುತ್ತಿದ್ದಾರೆ. ಕ್ರೋಧದ ರಿಪೋರ್ಟ್ ಅಂತೂ ಬಹಳಷ್ಟು ಬರುತ್ತವೆ. ದೊಡ್ಡದು-ಚಿಕ್ಕದು, ಭಿನ್ನ-ಭಿನ್ನ ರೂಪದಿಂದ ಕ್ರೋಧವನ್ನು ಮಾಡುತ್ತಾರೆ. ಈಗ ಬಾಪ್‌ದಾದಾರವರು ಹೆಚ್ಚು ಹೇಳುವುದಿಲ್ಲ, ಆದರೆ ಕಥೆಗಳಂತೂ ಬಹಳ ಮಜಾವಾಗಿವೆ. ಇದಕ್ಕಾಗಿ ಇಂದಿನಿಂದ ಈ ಕ್ರೋಧಕ್ಕೆ ಏನು ಮಾಡುತ್ತೀರಿ? ಬೀಳ್ಕೊಡುಗೆ ಕೊಡುತ್ತೀರಾ? (ಎಲ್ಲರೂ ಚಪ್ಪಾಳೆಯನ್ನು ಹಾಕಿದರು). ನೋಡಿ ಚಪ್ಪಾಳೆ ಹಾಕುವುದು ಸಹಜವಾಗಿದೆ ಆದರೆ ಕ್ರೋಧದ ಚಪ್ಪಾಳೆಯನ್ನು ಹಾಕಬೇಡಿರಿ. ಬಾಪ್‌ದಾದಾರವರು ಈಗ ಇದನ್ನು ಪದೇ ಪದೇ ಕೇಳಲು ಬಯಸುವುದಿಲ್ಲ ಆದರೂ ಸಹ ದಯೆ ಬರುತ್ತದೆ ಆದ್ದರಿಂದಲೇ ಕೇಳುತ್ತಾರೆ. ಇಂದಿನಿಂದ ಈ ರೀತಿ ಹೇಳಬೇಡಿರಿ ಬಾಬಾ ಮಾತಂತೂ ಕೊಟ್ಟಿದ್ದೆವು ಆದರೆ... ಪುನಃ ಪುನಃ ಬಂದುಬಿಟ್ಟಿತು, ಏನು ಮಾಡುವುದು! ಬಯಸುವುದಿಲ್ಲ, ಬಂದುಬಿಟ್ಟಿತ್ತು. ನೀವೇ ಮಾಯೆಗೆ ತಿಳಿಸಿರಿ, ಕ್ರೋಧಕ್ಕೆ ತಿಳಿಸಿರಿ ಎಂದು. ಈ ಪುರುಷಾರ್ಥವನ್ನು ಸಹ ತಂದೆಯೇ ಮಾಡಿದರೆ ಮಕ್ಕಳು ಪ್ರಾಲಬ್ಧವನ್ನು ಹೇಗೆ ಪಡೆಯುವಿರಿ? ಈ ಪರಿಶ್ರಮವು ತಂದೆ ಮಾಡಬೇಕೇ? ಇಂತಹ ಮಾತನ್ನು ತಂದೆಗೆ ಕೊಡಬೇಡಿರಿ, 5 ತಿಂಗಳ ನಂತರ ಪರಿಣಾಮವನ್ನು ನೋಡುವರು. ಭಲೇ ನೀವು ಹೇಳುತ್ತಿರೋ ಅಥವಾ ಹೇಳದೆ ಇರುತ್ತೀರೋ, ತಂದೆಯ ಹತ್ತಿರವಂತೂ ತಲುಪಿಬಿಡುತ್ತದೆ. ಏನು ಮಾಡುವುದು, ಆಗಿ ಹೋಯಿತು, ಪರಿಸ್ಥಿತಿ ಈ ರೀತಿ ಬರುತ್ತದೆ, ಬಹಳ ದೊಡ್ಡ ಮಾತಾಯಿತಲ್ಲವೇ!- ಇಂತಹ ರಿಸಲ್ಟ್ ಇರಬಾರದು. ತಂದೆಗೂ ಸಹ ತಿಳಿಸುವಂತಹ ಪ್ರಯತ್ನ ಪಡುತ್ತೀರಿ, ಬಹಳ ಬುದ್ಧಿವಂತರಾಗಿದ್ದೀರಿ. ಹೇಳುತ್ತಿರಿ ಬಾಬಾ ಚಿಕ್ಕ-ಪುಟ್ಟ ಮಾತುಗಳಂತೂ ಪಾರು ಮಾಡಿಬಿಡುತ್ತೇವೆ, ಆದರೆ ಇದು ಬಹಳ ದೊಡ್ಡ ವಿಷಯವಾಗಿತ್ತಲ್ಲವೇ! ಈಗ ಯಾರ ಮೇಲೆ ದೋಷವನ್ನು ಇಟ್ಟಿರಿ? ವಿಷಯದ ಮೇಲೆ. ಮತ್ತು ವಿಷಯ ಏನು ಮಾಡುವುದು? ಬಂದಿತು ಮತ್ತು ಹೋಯಿತು. 5,000 ವರ್ಷದ ನಂತರ ಆ ವಿಷಯ ಮತ್ತೆ ಬರುವುದು. ಯಾವುದು 5 ಸಾವಿರ ವರ್ಷದ ನಂತರ ಬರುವುದಿದೆ, ಅದರ ಮೇಲೆ ದೋಷವನ್ನಿಡುತ್ತಿರಿ. ಈ ರೀತಿ ಮಾಡಬೇಡಿರಿ. ಏನು

ಮಾಡುವುದು...! ಈ ಸಂಕಲ್ಪವನ್ನು ಸಹ ಮಾಡಬೇಡಿರಿ. ಬಾಪ್‌ದಾದಾರವರು ಕ್ರೋಧಕ್ಕಾಗಿ ಏಕೆ ವಿಶೇಷವಾಗಿ ಹೇಳುತ್ತಿದ್ದಾರೆ? ಏಕೆಂದರೆ ಒಂದುವೇಳೆ ಕ್ರೋಧಕ್ಕೆ ತಮ್ಮ ಬೀಳ್ಕೊಡುಗೆಯನ್ನು ಕೊಟ್ಟುಬಿಟ್ಟಿರಿ ಎಂದರೆ ಇದರಲ್ಲಿ ಲೋಭ, ಇಚ್ಛೆ ಎಲ್ಲವೂ ಬಂದುಬಿಡುತ್ತದೆ. ಲೋಭವು ಕೇವಲ ಹಣ ಮತ್ತು ತಿನ್ನುವುದರ ಮೇಲೆ ಬರುವುದಿಲ್ಲ, ಭಿನ್ನ-ಭಿನ್ನ ಪ್ರಕಾರದಾಗಿ, ಜ್ಞಾನಿ ಅಥವಾ ಅಜ್ಞಾನದ ಯಾವುದೇ ಇಚ್ಛೆ - ಇದು ಸಹ ಲೋಭವಾಗಿದೆ. ಕ್ರೋಧವನ್ನು ಸಮಾಪ್ತಿ ಮಾಡುವುದರಿಂದ ಲೋಭವು ಸ್ವತಹವಾಗಿ ಸಮಾಪ್ತಿಯಾಗಿಬಿಡುತ್ತದೆ, ಅಹಂಕಾರವೂ ಸಹ ಸಮಪ್ತಿಯಾಗಿಬಿಡುತ್ತದೆ. ಅಭಿಮಾನ ಬರುತ್ತದೆಯಲ್ಲವೇ - ನಾನು ದೊಡ್ಡವನು, ನಾನು ತಿಳುವಳಿಕೆಯುಳ್ಳವನು, ನನಗೆ ಗೊತ್ತಿದೆ - ಇವರು ತಮ್ಮನ್ನೇನೆಂದು ತಿಳಿದುಕೊಳ್ಳುತ್ತಾರೆ! ಆಗ ಕ್ರೋಧ ಬರುತ್ತದೆ. ಅಭಿಮಾನ ಮತ್ತು ಲೋಭ ಎರಡೂ ಒಟ್ಟಿಗೆ ಬೀಳ್ಕೊಡುಗೆಯನ್ನು ತೆಗೆದುಕೊಳ್ಳುತ್ತವೆ. ಆದ್ದರಿಂದಲೇ ಬಾಪ್‌ದಾದಾರವರು ವಿಶೇಷವಾಗಿ ಲೋಭಕ್ಕಾಗಿ ಹೇಳದೇ ಕ್ರೋಧಕ್ಕಾಗಿ ಅಂಡರ್ಲೈನ್ ಮಾಡಿಸುತ್ತಿದ್ದಾರೆ. ಆದ್ದರಿಂದ ಸಂಸ್ಕಾರವನ್ನು ಮಾಡಿಕೊಳ್ಳುತ್ತಿರಾ? ಈಗ ಎಲ್ಲರೂ ಕೈಯತ್ತಿರಿ ಮತ್ತು ಎಲ್ಲರ ಫೋಟೋವನ್ನು ತೆಗೆಯಿರಿ. (ಎಲ್ಲರೂ ಕೈಯೆತ್ತಿದರು) ಈಗ ಸ್ವಲ್ಪ ಶುಭಾಶಯಗಳನ್ನು ಕೊಡುತ್ತಾರೆ, ಬಹಳಷ್ಟು ಅಲ್ಲ ಮತ್ತು ಪುನಃ ರಿಸಲ್ಟ್ ನೋಡುವರು ಆಗ ವತನದ ದೇವತೆಗಳು ಸಹ, ಸ್ವರ್ಗದ ದೇವತೆಗಳು ಸಹ ನಿಮ್ಮ ಮೇಲೆ ವಾಹ್! ವಾಹ್ನ ಪುಷ್ಪಗಳನ್ನು ಸುರಿಸುವವರು.

ಇಂದಿನಿಂದ ಪ್ರತಿಯೊಬ್ಬರು ತಮ್ಮಲ್ಲಿ ನೋಡಿಕೊಳ್ಳಿರಿ, ಬೇರೆಯವರನ್ನು ನೋಡಬಾರದು. ಬೇರೆಯವರ ವಿಷಯಗಳನ್ನು ನೋಡುವ ಮನಸ್ಸಿನ ಕಣ್ಣುಗಳನ್ನು ಮುಚ್ಚಿಕೊಳ್ಳಿರಿ. ಸ್ಥೂಲ ಕಣ್ಣುಗಳನ್ನಂತೂ ಮುಚ್ಚಿಕೊಳ್ಳುವದಕ್ಕೆ ಸಾಧ್ಯವಿಲ್ಲ ಅಲ್ಲವೇ, ಆದರೆ ಮನಸ್ಸಿನ ಕಣ್ಣುಗಳನ್ನು ಮುಚ್ಚಿಕೊಳ್ಳಿರಿ - ಇನ್ನೊಬ್ಬರು ಮಾಡುತ್ತಾರೆ ಅಥವಾ ಮೂರನೇಯವರು ಮಾಡುತ್ತಾರೆ, ನಾನು ನೋಡಬಾರದು. ತಂದೆಯು ಸಹ ಇಷ್ಟು ಜೋರಾಗಿ ಒತ್ತಡ ಕೊಟ್ಟು ಹೇಳುತ್ತಿದ್ದಾರೆ ಒಂದುವೇಳೆ ಮಹಾರಥಿಯು ಸಹ ಈ ರೀತಿ ಯಾವುದೇ ಬಲಹೀನತೆಯನ್ನು ಮಾಡಿದರೆ ಅದನ್ನು ನೋಡುವುದಕ್ಕೋಸ್ಕರ ಅಥವಾ ಕೇಳುವುದಕ್ಕೆ ಮನಸ್ಸನ್ನು ಅಂತರ್ಮುಖಿಯನ್ನಾಗಿ ಮಾಡಿರಿ. ನಗು ಬರುವ ಒಂದು ವಿಷಯವನ್ನು ತಿಳಿಸಲೇ - ಬಾಪ್‌ದಾದಾರವರು ಇಂದು ಸ್ವಲ್ಪ ಸ್ಪಷ್ಟವಾಗಿ ತಿಳಿಸುತ್ತಿದ್ದಾರೆ, ಬೇಜಾರಂತು ಆಗುವುದಿಲ್ಲವೇ. ಒಳ್ಳೆಯದು. ಇನ್ನೊಂದು ಮಾತನ್ನು ಸ್ಪಷ್ಟವಾಗಿ ತಿಳಿಸುತ್ತೇನೆ. ಬಾಪ್‌ದಾದಾರವರು ನೋಡಿದರು, ಅಧಿಕ ಮಕ್ಕಳು ಸಮಯ ಪ್ರತಿ ಸಮಯ, ಸದಾ ಅಲ್ಲ ಕೆಲ ಕೆಲವೊಮ್ಮೆ ಮಹಾರಥಿಗಳ ವಿಶೇಷತೆಗಳನ್ನು ಕಡಿಮೆ ನೋಡಿ ಮತ್ತು ಬಲಹೀನತೆಗಳನ್ನು ಬಹಳ ಆಳವಾಗಿ ನೋಡುತ್ತಾರೆ ಮತ್ತು ಫಾಲೋ ಮಾಡುತ್ತಾರೆ. ಒಬ್ಬರು ಇನ್ನೊಬ್ಬರೊಂದಿಗೆ ವರ್ಣನೆಯನ್ನೂ ಮಾಡುತ್ತಾರೆ - ಏನಿದೆ, ಎಲ್ಲರನ್ನೂ ನೋಡಿದ್ದೇವೆ. ಮಾಹಾರಥಿಗಳು ಸಹ ಮಾಡುತ್ತಾರೆ, ನಾವಂತೂ ಹಿಂದೆ ಇದ್ದೇವೆ. ಈಗ ಮಹಾರಥಿಗಳು ಬದಲಾದಾಗ ನಾವು ಬದಲಾಗುವೆವು. ಆದರೆ ಮಹಾರಥಿಗಳ ತಪಸ್ಸು, ಮಹಾರಥಿಗಳ ಬಹುಕಾಲದ ಪುರುಷಾರ್ಥ ಅವರನ್ನು ಎಕ್ಸ್ಟ್ರಾ ಮಾರ್ಕ್ಸ್ ಕೊಟ್ಟು ಪಾಸ್ ವಿತ್ ಆನರ್ ಮಾಡಿಬಿಡುತ್ತದೆ. ನೀವು ಮಹಾರಥಿ ಬದಲಾದರೆ ನಾವು ಬದಲಾಗುವೆವು ಎಂದು ಕಾಯುತ್ತಿರುತ್ತೀರಿ, ಆಗ ಮೋಸ ಹೋಗಿಬಿಡುತ್ತೀರಿ, ಇದಕ್ಕಾಗಿ ಮನಸ್ಸನ್ನು ಅಂತರ್ಮುಖಿಯನ್ನಾಗಿ ಮಾಡಿಕೊಳ್ಳಿರಿ. ತಿಳಿಯಿತೇ. ಇದನ್ನು ಸಹ ಬಾಪ್‌ದಾದಾರವರು

ಕೇಳುತ್ತಾರೆ, ನೋಡಿ ಬಿಟ್ಟಿದ್ದೇವೆ... ನೋಡಿ ಬಿಟ್ಟಿದ್ದೇವೆ. ನಮಗೂ ಕಣ್ಣುಗಳಿವೆಯಲ್ಲವೇ, ನಮಗೂ ಕಿವಿಗಳಿವೆಯಲ್ಲವೇ, ನಾವು ಸಹ ಬಹಳಷ್ಟು ಕೇಳಿದ್ದೇವೆ. ಆದರೆ ಮಹಾರಥಿಗಳೊಂದಿಗೆ ಈ ಮಾತಿನಲ್ಲಿ ರೇಸ್(ಸ್ಪರ್ಧೆ) ಮಾಡಬೇಡಿರಿ, ಒಳ್ಳೆಯ ರೇಸನ್ನು ಮಾಡಿರಿ, ಕೆಟ್ಟದರ ರೇಸನ್ನು ಮಾಡಬೇಡಿರಿ. ಇಲ್ಲವೆಂದರೆ ಮೋಸ ಹೋಗುವಿರಿ. ತಂದೆಗೆ ದಯೆ ಬರುತ್ತದೆ ಏಕೆಂದರೆ ಮಾಹಾರಥಿಗಳ ಫೌಂಡೇಶನ್ ನಿಶ್ಚಯ, ಅಖಂಡ, ಅಚಲವಾಗಿದೆ, ಅದರ ಎಕ್ಸ್ಟ್ರಾ ಆಶೀರ್ವಾದಗಳು ಮಾಹಾರಥಿಗಳಿಗೆ ಸಿಗುತ್ತವೆ  ಇದಕ್ಕಾಗಿ ಎಂದೂ  ಮನಸ್ಸಿನ ಕಣ್ಣುಗಳನ್ನು ಈ ಮಾತಿಗಾಗಿ ತೆರೆಯಬೇಡಿರಿ, ಮುಚ್ಚಿಕೊಳ್ಳಿರಿ. ಕೇಳುವುದರ ಬದಲಾಗಿ ಮನಸ್ಸನ್ನು ಅಂತರಮುಖಿಯನ್ನಾಗಿ ಮಾಡಿಕೊಳ್ಳಿರಿ. ತಿಳಿಯಿತೇ.

ಇಂದು ಬಿಸಿಬಿಸಿ ಹಲ್ವಾ ತಿನಿಸಲಾಯಿತು. ಆದರೆ ನಿಜಸಂಸ್ಕಾರಗಳನ್ನಾಗಿ ಮಾಡಿಕೊಳ್ಳಿರಿ. ಪರಿಶ್ರಮ ಪಡುತ್ತೀರಿ, ಅದು ಸಹ ಬಾಪ್‌ದಾದಾರವರಿಗೆ ಇಷ್ಟವಿಲ್ಲ. ಬಾಪ್‌ದಾದಾರವರು ಮಕ್ಕಳ ಒಂದು ಅದ್ಭುತವಾದ ಚಿತ್ರವನ್ನು ನೋಡಿದರು. ಆ ಚಿತ್ರವನ್ನು ನೋಡುತ್ತೀರಾ. ಬಹಳಷ್ಟು ಹಲ್ವಾ ತಿಂದ್ದೀರಾ! ಚಿತ್ರವು ಅದ್ಭುತವಾಗಿದೆ. ಬಾಪ್‌ದಾದಾರವರಿಗೂ ಸಹ ಅದ್ಬುತವೆನಿಸುತ್ತದೆ. ಆ ಚಿತ್ರ ಯಾವುದು? ಯಾವುದೆಂದರೆ ಮಕ್ಕಳು ಹೇಳುವುದು ಒಂದು, ಮಾಡುವುದು ಇನ್ನೊಂದಾಗಿದೆ. ಬಾಯಿಂದ ಹೇಳುತ್ತಿರಿ - ನಾವು ಲಕ್ಷ್ಮಿ-ನಾರಾಯಣಗುವೆವು, ರಾಮ ಸೀತೆಯರಲ್ಲ, ಹೇಳುವುದು ಲಕ್ಷ್ಮಿ-ನಾರಾಯಣ, ಮತ್ತು ಮಾಡುವುದೇನು? ಲಕ್ಷ್ಮಿ-ನಾರಾಯಣರಾಗುತ್ತೇವೆ ಎಂದು ಹೇಳುತ್ತೀರಿ. ಹೇಳುವವರ ಬಾಯಲ್ಲಿ ಗುಲಾಬ್ಜಾಮೂನ್. ಆದರೆ ಏನು ಮಾಡುತ್ತೀರಿ? ಪಕ್ಕಾ ಲಕ್ಷ್ಮಿ ನಾರಾಯಣರಗುತ್ತೀರಾ ಎಂದು ಕೇಳಿರಿ? ಹೌದು ಎನ್ನುವರು. 100% ಲಕ್ಷ್ಮೀ-ನಾರಾಯಣರಾಗುತ್ತೇವೆ ಎಂದು ಹೇಳುತ್ತೀರಿ. ಆದರೆ ಚಿತ್ರವನ್ನು ಏನೆಂದು ತೋರಿಸುತ್ತೀರಿ? ತ್ರೇತಾಯುಗದ ರಾಮನ ಸಮಾನ ಯುದ್ಧ ಮಾಡುತ್ತಿರುತ್ತೀರಿ. ಬಿಲ್ಲು ಬಾಣ ಕೈಯಲ್ಲಿ ಸದಾ ಇರುತ್ತದೆ. ಲಕ್ಷ್ಮಿ-ನಾರಾಯಣರಾಗುತ್ತೇವೆ ಎಂದು ಹೇಳುತ್ತೀರಿ, ಆದರೆ ಪ್ರಾಕ್ಟಿಕಲ್ನಲ್ಲಿ ತ್ರೇತಾಯುಗದ ರಾಮನ ಸಮಾನ ಯುದ್ಧ ಮಾಡುತ್ತಿರುತ್ತೀರಿ. ಸದಾ ಅರ್ಧ ಸಮಯ ಯುದ್ಧದಲ್ಲಿ ಅರ್ಧ ಸಮಯ ಯೋಗದಲ್ಲಿ. ಎಲ್ಲರೂ ಅಲ್ಲ, ಆದರೆ ಅನೇಕರಿದ್ದಾರೆ. ಬಾಪ್‌ದಾದಾರವರಿಗೆ ಈ ಚಿತ್ರವನ್ನು ನೋಡಿ ಅದ್ಭುತ ಚಿತ್ರವೆನಿಸುತ್ತದೆ. ಏನು ಹೇಳುತ್ತಿರೋ, ಏನೋ ಒಳ್ಳೆಯದನ್ನು ಯೋಚಿಸುತ್ತಿರೋ ಅದನ್ನು ಮಾಡಲೇಬೇಕು. ಅದರ ಸಹಜ ವಿಧಿಯನ್ನು ತಿಳಿಸಿದರು. ವಾಸ್ತವ ನಿಜಸಂಸ್ಕಾರಗಳನ್ನು ಪ್ರತ್ಯಕ್ಷ ಮಾಡಿಕೊಳ್ಳಿರಿ. ಸಂಸ್ಕಾರದಿಂದ ಸ್ವತಹವಾಗಿ ಕರ್ಮ ಆಗಿಯೇ  ಬಿಡುತ್ತದೆ. ಪರಿಶ್ರಮ ಕಡಿಮೆ, ಸಫಲತೆ ಹೆಚ್ಚಾಗುತ್ತದೆ, ಪರಿಶ್ರಮದಿಂದ ಮುಕ್ತರಾಗಿ ಬಿಡುತ್ತೀರಿ, ಹೇಗೆ ಅರ್ಧಕಲ್ಪ  ವಿಶ್ವದ ಮಾಲೀಕರಾದಾಗ ಅನೇಕ ಪ್ರಕಾರದ ಪರಿಶ್ರಮದಿಂದ ಸ್ವತಃ ಮುಕ್ತರಾಗುತ್ತೀರಿ. ಈ ರೀತಿ ಈ ಸಮಯ ನಿಜ ಸಂಸ್ಕಾರಗಳನ್ನು ಸಂಸ್ಕಾರಗಳನ್ನಾಗಿ ಮಾಡಿಕೊಳ್ಳುವುದರಿಂದ ಸಹಜವಾಗಿ ಪರಿಶ್ರಮದಿಂದ ಮುಕ್ತರಾಗಿ ಬಿಡುತ್ತೀರಿ. ಸಮಯ ಪ್ರತಿ ಸಮಯ ಬಾಣವನ್ನು ಎತ್ತುವುದು, ಯುದ್ಧ ಮಾಡುವಂತಹ ಅವಶ್ಯಕತೆ ಇರುವುದಿಲ್ಲ. ನಿರಂತರ ಯೋಗಿ, ಸಹಜಯೋಗಿ, ಕರ್ಮಯೋಗಿ, ರಾಜಯೋಗಿ ಸ್ವತಃವಾಗಿ ಆಗಿಬಿಡುತ್ತೀರಿ. ಯೋಗವನ್ನು ಜೋಡಿಸುವ ಅವಶ್ಯಕತೆ ಇಲ್ಲ. ಆದರೆ ಪ್ರತಿ ಸೆಕೆಂಡ್, ಪ್ರತಿ ಸಮಯ ಯೋಗಿ ಜೀವನ ಸ್ವತಹವಾಗಿ ತಯಾರಾಗಿಬಿಡುತ್ತದೆ. ಅಂದಾಗ ಈ ರೀತಿ ಬಯಸುತ್ತೀರಾ?

ಜ್ಞಾನ, ಯೋಗ, ಧಾರಣೆ ಮತ್ತು ಸೇವೆ ಈ ನಾಲ್ಕು ಸಬ್ಜೆಕ್ಟ್ನ ಸಾರ ಎರಡು ಶಬ್ದವಾಗಿವೆ. ಒಂದು - ಬಾಬಾ ನನ್ನ ಸಂಸಾರವಾಗಿದ್ದಾರೆ. ಎರಡನೆಯದು - ಪ್ರತಿ ಗುಣ, ಪ್ರತಿ ಶಕ್ತಿ ನನ್ನ ನೀಜಸಂಸ್ಕಾರವಾಗಿವೆ. ಎರಡು ಶಬ್ದವನ್ನು ನೆನಪಿಟ್ಟುಕೊಳ್ಳಿರಿ - ಸಂಸಾರ ಮತ್ತು ಸಂಸ್ಕಾರ. ಕಷ್ಟವಿದೆಯೇ? ಸ್ವಲ್ಪ-ಸ್ವಲ್ಪ ಕಷ್ಟವಿದೆಯೇ? ಯಾವಾಗ ಮಾತು ಬರುತ್ತದೆಯೋ ಆಗ ಕಷ್ಟವೆನಿಸುತ್ತದೆಯೇ? ಆದರೆ ಮಾತುಗಳು ನಿಮ್ಮ ಮುಂದೆ ಏನಾಗಿದೆ? ಆ ವಿಷಯ ದೊಡ್ಡದಾಗಿದೆಯೇ ಅಥವಾ ತಂದೆಯು ದೊಡ್ಡವರಾಗಿದ್ದಾರೆಯೇ? ಯಾರು ದೊಡ್ಡವರಾಗಿದ್ದಾರೆ? ಆದರೆ ಆ ಸಮಯದಲ್ಲಿ ಮಾತು ದೊಡ್ಡದೆನಿಸುತ್ತದೆ. ಬಾಪ್‌ದಾದಾರವರ ಹತ್ತಿರ ಇಂತಹ ಸಮಯದ ಮಕ್ಕಳ ಚಿತ್ರಗಳು ಬಹಳಷ್ಟಿವೆ. ಮ್ಯೂಸಿಯಂ ಮಾಡಲಾಗಿದೆ. ಯಾವಾಗಲಾದರೂ ಬಂದರೆ ನೋಡಿರಿ. ತಮ್ಮದೇ ಚಿತ್ರವನ್ನು ನೋಡಿಕೊಳ್ಳಿರಿ. ಆದರೆ ಈಗ ಸಮಾಪ್ತಿ ಸಮಾರೋಹವನ್ನು ಆಚರಿಸಿರಿ. ಯಾವಾಗ ನೀವು ಸಮಾಪ್ತಿ ಸಮಾರೋಹವನ್ನು ಆಚರಿಸರುವಿರೋ ಆಗ ವಿಶ್ವ ಪರಿವರ್ತನೆಯ ಸಮಾರೋಹ ನಿಮ್ಮ ಮುಂದೆ ಬರುವುದು. ಇನ್ನೊಂದು ಮಾತು ತಿಳಿಸುವುದೇ, ಕೇಳಲು ತಯಾರಾಗಿದ್ದೀರಾ? ಬಾಲಕರು ಮಾಲೀಕರಾಗಿರುತ್ತಾರಲ್ಲವೇ. ಅಂದಾಗ ಮಾಲೀಕರಿಂದ ಆದೇಶವನ್ನು ಪಡೆದು ಹೇಳಲಾಗುತ್ತದೆ. ಬೇಹದ್ದಿನ ಹಾಲ್ ಆಗಿದೆ ಅಲ್ಲವೇ. ನೋಡಿರಿ ಹೇಗೆ ರುಂಡಮಾಲೆಯನ್ನು ತೋರಿಸುತ್ತಾರಲ್ಲವೇ. ಹಾಗೆಯೇ ಇಲ್ಲಿ ಬಂದು ನೋಡಿದರೆ, ರುಂಡಮಾಲೆ ಎನಿಸುತ್ತದೆ. ಕೇವಲ ನಿಮಗೆ ಮುಖ ಕಾಣಿಸುವುದು ಬೇಹದ್ದಿನ ಹಾಲ್‌ನಲ್ಲಿ ಬಾಪ್‌ದಾದಾರವರು ಸಹ ಇಂದು ತೆರೆದ ಹೃದಯದಿಂದ ಬೇಹದ್ದಿನ ಮಾತುಗಳನ್ನು ತಿಳಿಸುತ್ತಿದ್ದಾರೆ. ನಿನ್ನೆಯ ದಿನ ಯಾವುದಾಗಿತ್ತು? (ಬುಧವಾರ) ಬುಧವಾರದ ಮಾತಾಗಿದೆ. ಇವತ್ತಂತೂ ಎಲ್ಲರೂ ರಾತ್ರಿಯ ಆಟವನ್ನು ನೋಡಿ ಸ್ವಲ್ಪ ಸುಸ್ತಾಗಿದ್ದೀರಿ. ಸ್ವಲ್ಪ ಚಿಂತಿತರೂ ಆಗಿದ್ದೀರಲ್ಲವೇ. (ರಾತ್ರಿ ಬಿರುಗಾಳಿಯ ಜೊತೆಯಲ್ಲಿ ಮಳೆಯು ಸುರಿಯಿತು) ಆದರೆ ಅಂತಿಮ ಸಮಯದಲ್ಲಿ ಇನ್ನೂ ಬಹಳಷ್ಟು ಆಗುವುದಿದೆ. ಒಂದುವೇಳೆ ಸ್ವಲ್ಪವೂ ಸಹ ರಿಹರ್ಸಲ್ (ಪೂರ್ವಾಭ್ಯಾಸ) ಮಾಡಿದರೆ ಚೆನ್ನಾಗಿದೆ. ಸ್ವಲ್ಪ ರಿಹರ್ಸಲ್ (ಪೂರ್ವಾಭ್ಯಾಸ) ಆಗಬೇಕು. ಎಲ್ಲವನ್ನು ಪ್ಯಾಕ್ ಮಾಡಿ ಮತ್ತು ಓಡುವುದು - ಇದಂತೂ ಎಕ್ಸರ್ಸೈಜ್(ವ್ಯಾಯಾಮ) ಮಾಡಿಸಿತು. ವೃದ್ಧರಾದ ಮಾತೆಯರು ಓಡುವುದಿಲ್ಲ ಆದರೆ ರಾತ್ರಿಯಲ್ಲಿ ಹಾಸಿಗೆಯನ್ನು ತೆಗೆದುಕೊಂಡು ಓಡಿದರು. ಅದಕ್ಕಾಗಿ ಇದು ಸಹ ಒಂದು ಆಟವಾಗಿದೆ. ವ್ಯಾಯಾಮವಾಗಿಬಿಟ್ಟಿತ್ತಲ್ಲವೇ. ಕಾಲುಗಳೂ ನಡೆದವಲ್ಲವೇ. ಇವು ಚಿಕ್ಕ-ಪುಟ್ಟ ಪೂರ್ವಭ್ಯಾಸಗಳು ಅಂತಿಮದ ಮುಂದೆ ಏನೂ ಅಲ್ಲ. ಇದು ಸಹ ಅಭ್ಯಾಸವಾಗಬೇಕು. ಬಾಪ್‌ದಾದಾರವರು ಹೇಳಿದರು ಎವೆರ್‌ರೆಡಿಯಾಗಿರಿ (ಸದಾ ಸಿದ್ಧರಾಗಿರಿ). ಇದರಲ್ಲಿಯೂ ಎವೆರಡಿ, ಮಳೆ ಬಂತೆಂದರೆ ಸೆಕೆಂಡಿನಲ್ಲಿ ಹೋಗಬೇಕಾಗುತ್ತದೆ. ಯಾರಿಗಾದರೂ ತೊಂದರೆ ಆಯಿತೇ? ಸೆಕೆಂಡ್ನಲ್ಲಿ ಸೆಟ್ ಆಗಿಬಿಟ್ಟಿರಿ. ಬಾಪ್‌ದಾದಾರವರೂ ತಿಳಿಯುತ್ತಾರೆ ಎಲ್ಲಿವರೆಗೂ ಪರಿಪಕ್ವ ಆಗುವುದಿಲ್ಲವೋ ಅಲ್ಲಿಯವರೆಗೂ ಮಕ್ಕಳು ಕಡಿಮೆ ಬರಲಿ. ಆದರೆ ಎಷ್ಟು ಕಡಿಮೆ ಹೇಳುತ್ತೇವೆ ಅಷ್ಟು ಇನ್ನೂ ಹೆಚ್ಚಾಗಿ ಬರುತ್ತಾರೆ. ಕೆಂಪು ಬಾವುಟವನ್ನು ತೋರಿಸುತ್ತಾರೆ - ಬರಬೇಡಿ ಎಂದು, ಆದರೂ ಸಹ ಬಂದುಬಿಡುತ್ತಾರೆ. ಅಂದಾಗ ಆಟವನ್ನು ನೋಡಿದಿರಾ. ಬಾಪ್‌ದಾದಾರವರಿಗೆ ಮಕ್ಕಳ ಸ್ನೇಹವನ್ನು ನೋಡಿ ಖುಷಿಯಾಗುತ್ತದೆ ಮತ್ತು ಸದಾ ಮಕ್ಕಳಿಗೆ ಇದನ್ನೇ ಹೇಳುತ್ತಾರೆ - ಬನ್ನಿ ಮಕ್ಕಳೇ, ಬನ್ನಿ. ಬರಬೇಡಿ ಎಂದು ಹೇಗೆ ಹೇಳುವುದು! ಹೇಳಲು ಸಾಧ್ಯವೇ? ಎಲ್ಲರೂ, ಎಷ್ಟೇ ಬಂದಿದ್ದೀರಿ,

ಖುಷಿಯಿಂದ ಬಂದಿದ್ದೀರಿ ಮತ್ತು ಖುಷಿಯನ್ನು ತೆಗೆದುಕೊಂಡು ಹೋಗಿರಿ ಮತ್ತು ಟೋಲಿಯ ಜೊತೆಯಲ್ಲಿ ಮೊದಲು ಖುಷಿಯನ್ನು ಹಂಚಿರಿ ಅದರ ಜೊತೆಯಲ್ಲಿ ಟೋಲಿಯನ್ನು ಹಂಚಿರಿ, ಒಳ್ಳೆಯದು

ನಿನ್ನೆಯ ವಿಷಯವನ್ನು ಹೇಳುತ್ತಿದ್ದೇನೆ. ನಿನ್ನೆ ವತನದಲ್ಲಿ ಅಡ್ವಾನ್ಸ್ ಪಾರ್ಟಿ ಪ್ರತ್ಯಕ್ಷವಾಯಿತು ಮತ್ತು ಬಾಪ್‌ದಾದಾರವರೊಂದಿಗೆ ಆತ್ಮಿಕ ಸಂಭಾಷಣೆಯನ್ನು ಮಾಡುತ್ತಿದ್ದಾರೆ. ಬಾಪ್‌ದಾದಾರವರನ್ನು ಕೇಳುತ್ತಿದ್ದಾರೆ ನಮ್ಮನ್ನು ನಿಮಿತ್ತವಾಗಿ ಯಾವ ಸೇವಾರ್ಥ ಕಳಿಸಿದ್ದಿರೋ ಆ ಸೇವೆ ಯಾವಾಗ ಪ್ರಾರಂಭವಾಗುತ್ತದೆ? ಎಂದು. ಬಾಪ್‌ದಾದಾ ಯಾವ ಉತ್ತರವನ್ನು ಕೊಟ್ಟಿರುತ್ತಾರೆ? ಅವರು ಪದೇ ಪದೇ ಇದೇ ಹೇಳುತ್ತಿದ್ದಾರೆ. ಅಡ್ವಾನ್ಸ್ ಪಾರ್ಟಿಯಲ್ಲಿ ನಮಗೆ ಯಾವ ಜನ್ಮ ಲಭಿಸಿದೆಯೋ ಅದನ್ನು ವಿಶೇಷ ಕಾರ್ಯಕ್ಕಾಗಿ ಕೊಟ್ಟಿದ್ದೀರಿ. ಹೆಚ್ಚು ಜನ ಒಳ್ಳೆಯ ಯೋಗಿ ಆತ್ಮರು, ಜ್ಞಾನಿ ಆತ್ಮರು, ಮಹಾವೀರ ಆತ್ಮರು ಕೂಡ ಬಹಳ ಜನ ಅಡ್ವಾನ್ಸ್ ಪಾರ್ಟಿಯಲ್ಲಿ ಹೋಗಿದ್ದಾರೆ. ಮತ್ತು ಅವರ ಹಿಂದೆ ಹೋದವರು ಕೂಡ ಬಹಳ ಜನ ಸ್ನೇಹಿ, ಯೋಗಿ ಆತ್ಮರು ಇದ್ದಾರೆ. ಸ್ವಲ್ಪ ಜನ ನಿಮ್ಮ ಲೆಕ್ಕದ ಪ್ರಕಾರ ಮಹಾರಥಿ ಎಂದು ಹೇಳುವುದಿಲ್ಲ. ಹೆಚ್ಚು ಜನರನ್ನು ಸಾಧಾರಣವಾದವರೇ ಎಂದು ಹೇಳುತ್ತೀರಿ. ಆದರೆ ಅಂತಹವರಲ್ಲಿ ಕೂಡ ಸ್ನೇಹ ಮತ್ತು ಯೋಗದಲ್ಲಿ ಚೆನ್ನಾಗಿ ಶಕ್ತಿಶಾಲಿಯಾಗಿರುವವರಿದ್ದಾರೆ. ವಿಶೇಷವಾಗಿ ಯೋಗ ಎಂಬ ಸಬ್ಜೆಕ್ಟ್ ನಲ್ಲಿ ಮುಂದೆ ಇರುವಂತಹ ಆತ್ಮರ ಯೋಗಬಲದಿಂದ ಜನ್ಮವನ್ನು ಕೊಡಲು ನಿಮಿತ್ತವಾಗಿ ಹೊಸ ಸೃಷ್ಟಿಯನ್ನು ಸ್ಥಾಪಿಸುತ್ತಾರೆ. ಅಂತಹವರು ನಮ್ಮ ಸೇವೆ ಯಾವಾಗ ಪ್ರಾರಂಭವಾಗುತ್ತದೆ ಎಂದು ಕೇಳುತ್ತಿದ್ದಾರೆ. ಹೀಗೆ ಹೋಗಿರುವವರಲ್ಲಿ ಕೂಡ ಎಲ್ಲಾ ಆತ್ಮರಿಗೆ ಬೇರೆ ಬೇರೆ ಪಾತ್ರ ಕೂಡ ಇದೆ. ಎಲ್ಲರ ಪಾತ್ರವೂ ಒಂದೇ ವಿಧವಾಗಿ ಇರುವುದಿಲ್ಲ ಆದರೆ ಹೆಚ್ಚು ಜನಕ್ಕೆ ಹೊಸ ಸೃಷ್ಟಿಯ ಸ್ಥಾಪನೆಯ ಪಾತ್ರವಿದೆ. ಹೀಗೆ ಆತ್ಮಿಕ ಸಂಭಾಷಣೆಯಾಗುತ್ತದೆ. ಬಾಪ್‌ದಾದಾ ನಗುತ್ತಾ ಅವರನ್ನು ಬೇರೆ ಬೇರೆ ವಿಷಯಗಳಲ್ಲಿ ವ್ಯಸ್ತ ಮಾಡುತ್ತಾರೆ. ಏಕೆಂದರೆ ಯಾವಾಗ ಎಂಬುದಕ್ಕೆ ಉತ್ತರ ತಂದೆ ಒಬ್ಬರೇ ಹೇಳುವುದಿಲ್ಲ. ನೀವೆಲ್ಲರೂ ಕೂಡ ಹೇಳಬೇಕು. ನೀವು ಯಾವಾಗ ಎವರ್‌ರೆಡಿ ಎಂದು ಹೇಳುತ್ತೀರೋ ಆಗ ಅವರ ಸೇವೆ ಪ್ರಾರಂಭವಾಗುತ್ತದೆ. ಆದ್ದರಿಂದಲೇ ವಿನಾಶದ ಸಮಯ ಯಾವಾಗ ನಿರ್ಣಯ ಆಗುವುದಿಲ್ಲ ಅಕಸ್ಮಾತಾಗಿ ಆಗುತ್ತದೆ. ಮೊದಲೇ ನಿಮಗೆ ತಿಳಿಸುತ್ತಿದ್ದಾರೆ. ತಿಳಿಸಲೇ ಇಲ್ಲ ಎಂದು ನಂತರ ತಂದೆಯನ್ನು ನಿಂದಿಸಬಾರದು. ಅಕಸ್ಮಾತಾಗಿ ಆಗುತ್ತದೆ ಇದಕ್ಕಾಗಿ ಒಂದು ನಿಮಿತ್ತ ಮಹಾರಥಿಯನ್ನು ಉದಾಹರಣೆಯನ್ನಾಗಿ ಮಾಡಿದ್ದೇನೆ(ಚಂದ್ರಮಣಿ ದಾದಿ) ಡ್ರಾಮಾನುಸಾರ ನಡೆಯಿತು ಆದರೆ ಯಾವುದೋ ವಿಶಾಲ ಸೇವೆಗೆ ನಿಮಿತ್ತವಾಗುತ್ತಾರೆ ಆದ್ದರಿಂದ ಏನು ಮಾಡುತ್ತಾರೆ. ಬಾಪ್‌ದಾದಾರವರನ್ನು ಭೇಟಿಯಾದಾಗ ಎಲ್ಲರೂ ಮನಸ್ಸಿನಿಂದ ಹೇಳಬೇಕು. ಕಾಗದದ ಮೇಲೆ ಬರೆದು ಕೊಡುವ ಪ್ರತಿಜ್ಞೆ ಅಥವಾ ಬಾಯಿಂದ ಮಾಡುವ ಪ್ರತಿಜ್ಞೆಯಲ್ಲ. ಮನಸ್ಸಿನಲ್ಲಿ ಪ್ರತಿಜ್ಞೆ ಮಾಡಿ ತೋರಿಸಬೇಕು. "**ನಾವೆಲ್ಲರೂ ಎಲ್ಲಾ ಹಳೆಯ ಸಂಸ್ಕಾರಗಳನ್ನು ತೊಲಗಿಸಿಕೊಂಡು ನಮ್ಮ ನಿಜ ಸಂಸ್ಕಾರಗಳನ್ನು ಧಾರಣೆ ಮಾಡುವ ಎವರ್ ರೆಡಿ ಆತ್ಮರು**" ಎಂದು ಒಳ್ಳೆಯದೇನಾ? ಮಾಡುತ್ತೀರಾ? ಚಿಕ್ಕ ಚಿಕ್ಕ ವಿಷಯಗಳನ್ನು ಸಮಾಪ್ತಿ ಮಾಡಿರಿ ೬೦ ವರ್ಷಗಳಿರುವವರು ಕೂಡ ಚಿಕ್ಕ ಮಕ್ಕಳಂತೆ ಚೆಂಡಿನಿಂದ ಆಡುತ್ತಿದ್ದರೆ ಚೆನ್ನಾಗಿರುವುದಿಲ್ಲ ತಾನೆ! ಹಾಗೆಯೇ ನೀವು ಕೂಡ ಚಂಡಿನಿಂದಲೇ ಅಲ್ಲ ಮಣ್ಣಿನಿಂದ ಕೂಡ ಆಡುತ್ತಿದ್ದೀರಿ. ಅಭಿಮಾನ ಎಂಬ ಮಣ್ಣಿನಲ್ಲಿ ಆಟವಾಡುತ್ತಿದ್ದೀರಿ. ಈಗ ಜ್ಞಾನ ರತ್ನಗಳಿಂದ ಆಟವಾಡಿರಿ,

ಗುಣಗಳಿಂದ ಆಟವಾಡಿರಿ, ಶಕ್ತಿಗಳಿಂದ ಆಟವಾಡಿರಿ ಮಣ್ಣಿನಿಂದ ಅಲ್ಲ. ಯಾವ ರೀತಿಯಾದರೂ ದೇಹ ಅಭಿಮಾನದಲ್ಲಿ ಬಂದರೆ ಮಣ್ಣಿನೊಂದಿಗೆ ಆಟವಾಡಿದ ಹಾಗೆಯೇ. ವತನದ ಸಮಾಚಾರವನ್ನು ಕೇಳಿದಿರಾ?

ಇಂದು ವಿಶೇಷವಾಗಿ ಯಜ್ಞಮಾತೆ(ಸರಸ್ವತಿ ಮಾತಾ) ಎಲ್ಲರಿಗೂ ಪ್ರಿಯಸ್ಮೃತಿಗಳನ್ನು ಕೊಟ್ಟರು. ಎಲ್ಲರೂ ಕೊಟ್ಟರು ಆದರೆ ವಿಶೇಷವಾಗಿ ಯಜ್ಞಮಾತೆ ನಿಮ್ಮೆಲ್ಲರಿಗೆ ಮನಸ್ಸಿನಿಂದ ಬಹಳ ಬಹಳ ಪ್ರಿಯಸ್ಮೃತಿಗಳನ್ನು ಕೊಟ್ಟರು. ಮತ್ತು ಇದೇ ಮಹಾ ಮಂತ್ರವನ್ನು ಸ್ಮೃತಿ ಮಾಡಿಸುತ್ತಿದ್ದಾರೆ ಈಗ ಮನೆಗೆ ಹೋಗಲು ತಯಾರಾಗಿರಿ. ಹದ್ದು(ಪರಿಮಿತಿ)ಯನ್ನು ಬಿಟ್ಟುಬಿಡಿ, ಹೈ ಜಂಪ್ ಮಾಡಿರಿ. ಯಜ್ಞಮಾತೆಯೊಂದಿಗೆ ಪ್ರೀತಿ ಇದೆ ಅಲ್ಲವೇ, ಒಳ್ಳೆಯದು. ಇಂದು ಬಹಳ ವಿಷಯಗಳನ್ನು ತಿಳಿಸಿದ್ದೇನೆ. ಈಗ ಒಂದು ಕ್ಷಣದಲ್ಲಿ, ಒಂದು ಬಾರಿ ಮನಸ್ಸು, ಬುದ್ಧಿಯನ್ನು ಸ್ವಷ್ಟವಾಗಿಸಿಕೊಂಡು ಒಂದೇ ತಂದೆಯೊಂದಿಗೆ ಸರ್ವ ಸಂಬಂಧಗಳ, ತಂದೆಯೇ ಪ್ರಪಂಚ. ವ್ಯಕ್ತಿಗಳಾದರೂ, ಸಂಬಂಧವಾದರೂ, ಪ್ರಾಪ್ತಿಗಳಾದರೂ, ಎಲ್ಲಾ ಒಬ್ಬ ತಂದೆಯೇ. ಹೀಗೆ ತಂದೆಯ ಸ್ಮೃತಿಯಲ್ಲಿ, ಈ ರೂಪದಲ್ಲಿ, ಈ ರಸದಲ್ಲಿ, ಈ ಅನುಭವದಲ್ಲಿ ಲೀನವಾಗಿ ಬಿಡಿ. (ಹೀಗೆ ಬಾಪ್‌ದಾದಾ ಮೂರು ನಿಮಿಷಗಳ ವ್ಯಾಯಾಮವನ್ನು ಮಾಡಿಸಿದರು), ಒಳ್ಳೆಯದು.

**ನಾಲ್ಕಾರು ಕಡೆಯ ಸರ್ವ ಬಾಪ್‌ದಾದಾರವರ ಲವಲೀನ ಆತ್ಮರಿಗೆ, ಸರ್ವ ತಂದೆಯ ಸೇವಾಧಾರಿ ಆತ್ಮರಿಗೆ, ಸರ್ವ ಸಹಜ ಪುರುಷಾರ್ಥವನ್ನು ತಮ್ಮದಾಗಿಸಿಕೊಳ್ಳುವಂತಹ ಶ್ರೇಷ್ಠ ಆತ್ಮರಿಗೆ, ಸದಾ ತಂದೆಯ ಸಮಾನ ಆಗುವಂತಹ ಲಕ್ಷ್ಯ ಮತ್ತು ಲಕ್ಷಣವನ್ನು ಸಮಾನವಾಗಿ ಮಾಡಿಕೊಳ್ಳುವಂತಹ ತಂದೆಯ ಸಮೀಪ ಆತ್ಮರಿಗೆ, ಬಾಪ್‌ದಾದಾರವರ ಬಹಳ-ಬಹಳ ನೆನಪು, ಪ್ರೀತಿ ಮತ್ತು ನಮಸ್ತೆ.**

ರಿವೈಸ್ ಕೋರ್ಸ್ 03-04-1997.

***ಹಳೆಯ ಸಂಸ್ಕಾರಗಳನ್ನು ಸಮಾಪ್ತಿ ಮಾಡಿ ತಮ್ಮ ನಿಜ ಸಂಸ್ಕಾರಗಳನ್ನು ಧಾರಣೆ ಮಾಡುವಂತಹ ಎವರ್ ರೆಡಿಯಾಗಿರಿ.***

ಬ್ರಾಹ್ಮಣಾತ್ಮರ ನಿಜ ಸಂಸ್ಕಾರವೇನು? ಕ್ರೋಧವೇ ಅಥವಾ ಸಹನೆ ಶಕ್ತಿಯೇ? ಸಹನೆ ಶಕ್ತಿಯಲ್ಲವೇ. ಅವಗುಣಗಳನ್ನು ಸಂಸ್ಕಾರವನ್ನಾಗಿ ಮಾಡಿಕೊಂಡಿದ್ದೀರಿ. ಚೆನ್ನಾಗಿ ಕುಟ್ಟಿ ತುಂಬಿಕೊಂಡು ಬಿಟ್ಟಿದ್ದೀರಿ. ಆದ್ದರಿಂದಲೇ ಅವಶ್ಯಕತೆ ಇಲ್ಲದಿದ್ದರೂ ಬಂದುಬಿಡುತ್ತಿವೆ. ಮತ್ತೊಮ್ಮೆ ತಂದೆಯನ್ನು ಮಿಲನ ಮಾಡಿದಾಗ ಎಲ್ಲರೂ ಮನಸ್ಸಿನಿಂದ ಹೇಳಬೇಕು. ಕಾಗದದ ಮೇಲೆ ಬರೆಯುವ ಅಥವಾ ಬಾಯಿಂದ ಹೇಳುವ ಪ್ರತಿಜ್ಞೆಯಲ್ಲ. ಮನಸ್ಸಿನಿಂದ ಪ್ರತಿಜ್ಞೆ ಮಾಡಿ ತೋರಿಸಬೇಕು. "ನಾವೆಲ್ಲರೂ ಎಲ್ಲಾ ಹಳೆಯ ಸಂಸ್ಕಾರಗಳನ್ನು ತೊಲಗಿಸಿಕೊಂಡು, ನಮ್ಮ ನಿಜ ಸಂಸ್ಕಾರಗಳನ್ನು ಧಾರಣೆ ಮಾಡುವ ಎವರ್ ರೆಡಿ ಆತ್ಮರು" ಎಂದು ಒಳ್ಳೆಯದೇ? ಮಾಡುತ್ತೀರಾ? ಚಿಕ್ಕ ಚಿಕ್ಕ ವಿಷಯಗಳನ್ನು ಸಮಾಪ್ತಿ ಮಾಡಿರಿ. ಎಂದು

ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ನನ್ನ ಶ್ರೇಷ್ಠ ಭಾಗ್ಯದ ಸ್ಮೃತಿ ಸ್ವರೂಪವಾಗಿದ್ದೇನೆ.

2. ನಾನು ಯೋಚಿಸುವುದು, ಮಾತನಾಡುವುದು ಮತ್ತು ಕರ್ಮದಲ್ಲಿ ಮಾಡುವುದು ಮೂರರ ಸಮಾನತೆಯಿಂದ ನಿಶ್ಚಯ ಮತ್ತು ನಶೆಯನ್ನು ಪ್ರತ್ಯಕ್ಷ ಮಾಡಿದ್ದೇನೆ.

3. ನಾನು ಧಾರಣೆಯ ವಿಷಯದಲ್ಲಿ "ಆದರೆ" ಎಂಬ ಮಾತನ್ನು ಸಮಾಪ್ತಿ ಮಾಡಿ ತಂದೆಯ ಸಮಾನತೆಗೆ ಸಮೀಪವಾಗಿದ್ದೇನೆ.

4. ದ್ವಾಪರ ಯುಗದಿಂದ ತಯಾರಾಗಿರುವ ವಿರುದ್ಧ ಸಂಸ್ಕಾರಗಳನ್ನು ಸಮಾಪ್ತಿ ಮಾಡಿ ಈಗ ನಾನು ಪ್ರತಿಯೊಂದು ಗುಣವನ್ನು, ಪ್ರತಿಯೊಂದು ಜ್ಞಾನದ ವಿಷಯವನ್ನು ಸಂಸ್ಕಾರವನ್ನಾಗಿಸಿ ಕೊಂಡಿದ್ದೇನೆ.

5. ಬ್ರಾಹ್ಮಣಾತ್ಮನಾದ ನನ್ನ ನಿಜ ಸಂಸ್ಕಾರ ಸಹನೆ ಶಕ್ತಿ ಮತ್ತು ಶಾಂತಿ ಶಕ್ತಿ.

6. ನಾನು ರಾವಣನ ಸಂಸ್ಕಾರಗಳನ್ನು ಸಮಾಪ್ತಿ ಮಾಡಿ ತಂದೆಯ ಖಜಾನೆಯನ್ನು ನನ್ನದಾಗಿಸಿಕೊಂಡು ಸದಾ ನನ್ನ ನಿಜ ಸಂಸ್ಕಾರದ ಸ್ಮೃತಿಯಲ್ಲಿದ್ದೇನೆ.

7. ನಾನು ಕ್ರೋಧದ ಮಹಾನ್ ರೂಪ ಮತ್ತು ಸೂಕ್ಷ್ಮ ರೂಪ (ಏರ್ಷೆ, ದ್ವೇಷ ತಿರಸ್ಕಾರ ಮತ್ತು ನಿಯಮವನ್ನು ಕೈಯಲ್ಲಿ ತೆಗೆದುಕೊಳ್ಳುವುದನ್ನು) ಸಮಾಪ್ತಿ ಮಾಡಿರುವ ಜ್ಞಾನ ಸ್ವರೂಪ.

8. ನಾನು ಕ್ರೋಧವನ್ನು ಸಮಾಪ್ತಿ ಮಾಡಿರುವುದರಿಂದ ಲೋಭ, ಇಚ್ಛೆ, ಅಹಂಕಾರ ಅಭಿಮಾನಗಳು ಸ್ವತಹವಾಗಿ ಸಮಾಪ್ತಿಯಾಗಿವೆ.

9. ನಾನು ಪರಿಸ್ಥಿತಿಗಳ ಮೇಲೆ, ವಿಷಯಗಳ ಮೇಲೆ ದೋಷವನ್ನು ಇಟ್ಟು, ಏನು ಮಾಡುವುದು? ಕ್ರೋಧ ಬಂದುಬಿಡುತ್ತದೆ ಎಂಬುದು ನನ್ನ ಸಂಕಲ್ಪದಲ್ಲಿ ಕೂಡ ಬರದಷ್ಟು ಶಕ್ತಿಶಾಲಿಯಾಗಿದ್ದೇನೆ.

10. ನಾನು ಇತರರನ್ನು ನೋಡುವ ಮನಸ್ಸಿನ ಕಣ್ಣನ್ನು ಮುಚ್ಚಿ, ಸ್ವಯಂ ಅನ್ನು ನೋಡಿಕೊಂಡು ಮನಸ್ಸನ್ನು ಅಂತರ್ಮುಖಿಯಾಗಿ ಮಾಡಿದ್ದೇನೆ.

11. ನಾನು ಹೇಳುವುದು ಮತ್ತು ಮಾಡುವುದರಲ್ಲಿ ಸಮಾನವಾಗಿ ಇದ್ದೇನೆ.

12. ನಾನು ನಿಜಸಂಸ್ಕಾರಗಳನ್ನು ನನ್ನ ಸಂಸ್ಕಾರಗಳನ್ನಾಗಿ ಮಾಡಿಕೊಂಡು ಸ್ವತಃವಾಗಿ ನಿರಂತರ ಯೋಗಿ ಕರ್ಮಯೋಗಿ ರಾಜಯೋಗಿಯಾಗಿದ್ದೇನೆ.

13. ತಂದೆಯೇ ನನ್ನ ಪ್ರಪಂಚ, ಪ್ರತಿಯೊಂದು ಗುಣ, ಪ್ರತಿಯೊಂದು ಶಕ್ತಿ ನನ್ನ ನಿಜ ಸಂಸ್ಕಾರ (ಸಂಸಾರ ಮತ್ತು ಸಂಸ್ಕಾರ) ಎಂಬ ಎರಡು ಮಾತುಗಳನ್ನು ಸದಾ ಸ್ಮೃತಿಯಲ್ಲಿಟ್ಟುಕೊಂಡಿದ್ದೇನೆ.

14. ನಾನು ಎವರ್ ರೆಡಿಯಾಗಿದ್ದೇನೆ.

15. ನಾನು "ನಾವೆಲ್ಲರೂ ಎಲ್ಲಾ ಹಳೆಯ ಸಂಸ್ಕಾರಗಳನ್ನು ತೊಲಗಿಸಿಕೊಂಡು, ನಮ್ಮ ನಿಜ ಸಂಸ್ಕಾರಗಳನ್ನು ಧಾರಣೆ ಮಾಡುವ ಎವೆರ್ ರೆಡಿ ಆತ್ಮರು" ಎಂಬ ಮನಸ್ಸಿನ ಪ್ರತಿಜ್ಞೆಯ ಪ್ರತ್ಯಕ್ಷ ಸ್ವರೂಪ.

16. ನಾನು ಜ್ಞಾನ ರತ್ನಗಳೊಂದಿಗೆ, ಗುಣಗಳೊಂದಿಗೆ, ಶಕ್ತಿಗಳೊಂದಿಗೆ ಆಟವಾಡುತ್ತಿದ್ದೇನೆ. (ದೇಹಾಭಿಮಾನವೆಂಬ ಮಣ್ಣಿನೊಂದಿಗೆ ಅಲ್ಲ)

17. ನಾನು ಪರಿಮಿತಿ ಹದ್ದುಗಳನ್ನು ಬಿಟ್ಟು ಬೇಹದ್ ನಲ್ಲಿ ಇದ್ದು ಹೈಜಂಪ್ ಮಾಡಿದ್ದೇನೆ.

18. ನಾನು ಒಂದು ಕ್ಷಣದಲ್ಲಿ, ಒಂದೇ ಬಾರಿ ಮನಸ್ಸು, ಬುದ್ಧಿಯನ್ನು ಸ್ಪಷ್ಟವಾಗಿಸಿಕೊಂಡು, ಒಬ್ಬ ತಂದೆಯೊಂದಿಗೆ ಸರ್ವ ಸಂಬಂಧಗಳು, ತಂದೆಯೇ ಪ್ರಪಂಚ ವ್ಯಕ್ತಿಗಳಾದರೂ, ಸಂಬಂಧವಾದರೂ" ಪ್ರಾಪ್ತಿಯಾದರೂ, ಎಲ್ಲವೂ ಒಬ್ಬ ತಂದೆಯೇ, ಹೀಗೆ ತಂದೆಯ ಸ್ಮೃತಿಯಲ್ಲಿ, ಈ ರೂಪದಲ್ಲಿ, ಈ ರಸದಲ್ಲಿ, ಈ ಅನುಭವದಲ್ಲಿ, ಲೀನವಾಗುವ ವ್ಯಾಯಾಮವನ್ನು ಪದೇಪದೇ ಮಾಡುತ್ತಿದ್ದೇನೆ.